ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ದೊಡ್ಡ ಚರಂಡಿಗಳನ್ನು ಡೆಕ್ ಸ್ಲಾಬ್ ಮೂಲಕ ಮುಚ್ಚುವ ಯೋಜನೆ ಮಹಾನಗರ ಪಾಲಿಕೆಯ ಮುಂದಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ಚರಂಡಿಗಳನ್ನು ಮುಚ್ಚುವುದರಿಂದ ಲಭ್ಯವಾಗುವ ಮೇಲ್ಪಾಗದ ಪ್ರದೇಶಗಳ ಸೂಕ್ತ ರಕ್ಷಣೆ ಬಳಕೆಗೆ ಪಾಲಿಕೆ ಮುಂದಿರುವ ಯೋಜನೆಗಳೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಕಲ್ಯಾಣ ಕಾರ್ಯಕ್ರಮಗಳು.

2209(2914)

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಇರುವ ಯೋಜನೆಗಳೇನು?

ಆ)ಈ ಯೋಜನೆಗಳ ಫಲಾನುಭವಿಗಳನ್ನು ವಿಧಾನ ಸಭಾ ಸದಸ್ಯರು ಹಾಗೂ ಪಾಲಿಕೆ ಸದಸ್ಯರಿಗೆಂದು ನಿಗಧಿಪಡಿಸಿರುವುದು ನಿಜವೇ? ಯಾವ ಯಾವ ಯೋಜನೆಯಲ್ಲಿ ಎಷ್ಟೆಷ್ಟು ಫಲಾನುಭವಿಗಳ ಸಂಖ್ಯೆಯನ್ನು ನಿಗಧಿಪಡಿಸಲಾಗಿದೆ?

ಇ) ಇದಕ್ಕೆ ಅನುಸರಿಸಿರುವ ಮಾನದಂಡವೇನು?

ಈ) ಕಳೆದ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಪ್ರತಿ ವಿಧಾನ ಸಭಾ ಸದಸ್ಯರ ಕ್ಷೇತ್ರಗಳಿಗೆ ಹಂಚಿಕೆ ಮಾಡಿ ನೀಡಲಾದ ಫಲಾನುಭವಿಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ವಿವರ ನೀಡುವುದು ಯೋಜನೆವಾರು ವಿವರ ನೀಡುವುದು)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಯೋಜನೆಗಳು ಕೆಳಕಂಡಂತಿವೆ:

1) ವಾಹನ ಚಾಲನೆ ತರಬೇತಿ

2) ಹೊಲಿಗೆ:ನಿಟ್ಟಿಂಗ್ ಮತ್ತು ಎಂಬ್ರಾಯಿಡರಿ

3) ಗಣಕ ತರಬೇತಿ

4) ಎಲೆಕ್ಟ್ರಿಕಲ್ ವೈರಿಂಗ್

5) ಕಾಯರ್ ತರಬೇತಿ

ಆ) ಹೌದು. ವಾಹನ ಚಾಲನೆ ತರಬೇತಿಗೆ ಮಾತ್ರ ಫಲಾನುಭವಿಗಳ ಸಂಖ್ಯೆ ನಿಗಧಿಗೊಳಿಸಿದ್ದು, ವಿವರ ಕೆಳಕಂಡಂತಿದೆ:

		ಹಿಂದುಳಿದ:ಅಲ್ಪ ಸಂಖ್ಯಾತರು	ಪರಿಶಿಷ್ಟಜಾತಿ: ಪಂಗಡ
(1)	ವಿಧಾನ ಸಭಾ ಸದಸ್ಯರು	05	05
(2)	ಮಹಾಪೌರರು	15	15
(3)	ಉಪಮಹಾಪೌರರು	10	10
(4)	ನಗರಸಭಾಸದಸ್ಯರು	25	15
(5)	ಅಧ್ಯಕ್ಷರು ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಸ್ಥಾಯಿ ಸಮಿತಿ	05	05
(6)	ಸದಸ್ಯರು ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ	12	18

ಇ) ಸ್ಥಾಯಿ ಸಮಿತಿಯ ನಿರ್ಣಯದಂತೆ ನಿಗಧಿಗೊಳಿಸಿದ್ದು.

ಈ) ಪಟ್ಟಿ ಲಗತ್ತಿಸಿದೆ.

ಪಟ್ಟಿ

ಕ್ರಮ ಸಂಖ್ಯೆ	ವಿಧಾನ ಸಭಾ ಕ್ಷೇತ್ರದ ಹೆಸರು	ವಾಹನ ತರಬೇತಿ		ಒಟ್ಟು
		ವಿಧಾನಸಭಾ ಸದಸ್ಯರ ಮೂಲಕ ಸ್ವೀಕರಿಸಿದ ಅರ್ಜಿಗಳು	ನಗರಸಭಾ ಸದಸ್ಯರಿಂದ ಸ್ವೀಕರಿಸಿದ ಅರ್ಜಿಗಳು	
1)	ಮಲ್ಲೇಶ್ವರಂ	10	159	169
2)	ರಾಜಾಜಿನಗರ	10	391	401
3)	ಗಾಂಧೀನಗರ	10	204	214
4)	ಚಿಕ್ಕಪೇಟೆ	10	117	127
5)	ಬಿನ್ನಿಪೇಟೆ	10	679	689
6)	ಚಾಮರಾಜಪೇಟೆ	10	120	130
7)	ಬಸವನಗುಡಿ	10	290	300
8)	ಜಯನಗರ	25	368	393
9)	ಶಾಂತಿ ನಗರ	12	379	391
10)	ಶಿವಾಜಿನಗರ	20	139	150
11)	ಭಾರತಿ ನಗರ	10	273	283
12)	ಜಯಮಹಲ್	10	239	249
13)	ಉತ್ತರಹಳ್ಳಿ	10	885	895
14)	ಯಲಹಂಕ	-	412	412
15)	ವರ್ತೂರು	-	316	316
16)	ನಾಮನಿರ್ದೇಶಿತ ಸದಸ್ಯರು ನಗರಪಾಲಿಕೆ ಕಾರ್ಮಿಕ ಸಂಘಗಳು, ಕಛೇರಿಗೆ ನೇರವಾಗಿ ಬಂದಂತಹ ಅರ್ಜಿಗಳು	-	-	2129
	ಒಟ್ಟು			7248

ಹೂಲಿಗ ತರಬೇತಿ ಫಲಾನುಭವಿಗಳು	ನಿಟ್ಟಿಂಗ್ ತರಬೇತಿ ಫಲಾನುಭವಿಗಳು	ಎಂಬ್ರಾಯಿಡರಿ ತರಬೇತಿ ಫಲಾನುಭವಿಗಳು
222	74	30
505	275	29
307	142	-
235	100	-
1073	404	40
239	104	29
537	78	-
395	137	113
332	217	36
315	154	73
350	250	61
342	130	122
857	248	80
353	116	57
314	80	80
-	-	-
6376	2509	750